## ಸಾಬರಬಣ್ಣ

ವೀಸಾಕೆ ಅಪ್ಲೈ ಮಾಡಿದೆವು. ಪೊಲೀಸ್ ಸ್ಟೇಷನ್ನಿನಿಂದ ವೇರಿಫಿಕೇಷನ್ನಿಗೆ ಕರೆ ಬರುತ್ತದೆ, ಯಾವ ಪೊಲೀಸ್ ಸ್ಟೇಷನ್ ಎಂದು ಸರಿಯಾಗಿ ಕೇಳಿಕೊಳ್ಳಿ ಎಂದು ಎಲ್ಲರಿಗೂ ಯಜಮಾನರು ಹೇಳಿದ್ದರು. ನನಗೆ ಕರೆ ಬಂದಾಗ ನಾನು ಯಾವುದೊ ಕೆಲಸದಲ್ಲಿದ್ದಿದ್ದರಿಂದ ಕರೆಯನ್ನು ಮಗಳು ರಿಸೀವ್ ಮಾಡಿದಳು. 'ಯಾರದು ಫೋನ್? ಏನಂತೆ?' ಎಂದು ಕೇಳಿದೆ. 'ಅಮ್ಮಾ, ನಿಂದು ಸಾಬರಬಣ್ಣ ಪೊಲೀಸ್ ಸ್ಟೇಷನ್ ಅಂತೆ' ಎಂದಾಗ ನಾನು ಕಕ್ಕಾಬಿಕ್ಕಿ. ಮತ್ತೊಮ್ಮೆ ಅದೇ ನಂಬರ್‌ಗೆ ಕರೆಮಾಡಿ ಕೇಳಿದಾಗ 'ಸಬ್ ಅರ್ಬನ್ ಪೊಲೀಸ್ ಸ್ಟೇಷನ್‌ಗೆ ಬನ್ನಿ' ಎನ್ನುತ್ತಿದ್ದಂತೆ ನಗೂ ನಗು.

**ನಳಿನಿ ಟಿ. ಭೀಮಪ್ಪ**






## ಸ್ವಾದಿಷ್ಟ ಪಶು ಆಹಾರ!

ಆರನೇ ತರಗತಿಯಲ್ಲಿ ಓದುತ್ತಿರುವ ನನ್ನ ಸೋದರಿಯ ಮಗಳು ಅಂಶಿಯ ಜೊತೆ ಕಾರ್ಕಳದ ಪೇಟೆ ಸುತ್ತಾಡಲು ಹೋಗಿದ್ದೆ. ಒಂದೆಡೆ ಅಂಗಡಿಯ ಮುಂದೆ ಒಂದು ಜಾಹೀರಾತು ಫಲಕದಲ್ಲಿ, 'ಸ್ವಾದಿಷ್ಟ ಹಾಗೂ ಪೌಷ್ಟಿಕ ಪಶು ಆಹಾರ' ಎಂಬುದಾಗಿ ಪಶು ಆಹಾರದ ಬ್ರ್ಯಾಂಡ್ ಒಂದರ ಜಾಹೀರಾತು ಹಾಕಲಾಗಿತ್ತು. ಅದನ್ನು ಓದಿದವಳೇ ಅಂಗಡಿಯವನಿಗೆ,'ಈ ಆಹಾರ ಸ್ವಾದಿಷ್ಟವೆಂದು ಯಾರು ಹೇಳಿದರು? ಪಶುಗಳು ಬಂದು ಹೇಳಿದವಾ? ಅಥವಾ ನೀವೇ ರುಚಿ ನೋಡಿದ್ರಾ?' ಎಂದು ಕೇಳಿದರು. ಅಂಗಡಿಯವ ಉತ್ತರಿಸದೇ ಸುಮ್ಮನೇ ನಿಂತ. 'ಈ ಆಹಾರವನ್ನು ಪಶುಗಳು ಇಷ್ಟಪಟ್ಟು ತಿನ್ನುವುದನ್ನು ನೋಡಿ ಹಾಗೆ ಬರೆದಿರಬೇಕು' ಎಂದು ಹೇಳಿದ ಮೇಲೆ ಸುಮ್ಮನಾದಳು. ಅಂಗಡಿಯವ ನೆಮ್ಮದಿಯ ನಿಟ್ಟುಸಿರು ಬಿಟ್ಟ.

ಕಲೆ: ಗಣೇಶ ಆಚಾರ್ಯ

**ರಮಣ್ ಶೆಟ್ಟಿ ರೆಂಜಾಳ್**